International Journal of Kannada Research 2024; 10(1): 75-79




International Journal of Kannada Research
www.kannadajournal.com

**ISSN: 2454–5813**
IJKR 2024; 10(1): 75-79
© 2024 IJKR
www.kannadajournal.com
Received: 02-11-2023
Accepted: 06-12-2023

**ಶ್ರೀ ಸಚಿನ್. ಆರ್**
ಸಹಾಯಕ ಪ್ರಾಧ್ಯಾಪಕ,
ಲೊಯೊಲಾ ಕಾಲೇಜು
ಮನವಿ, ಕರ್ನಾಟಕ,
ಭಾರತ

**Corresponding Author:**
**ಶ್ರೀ ಸಚಿನ್. ಆರ್**
ಸಹಾಯಕ ಪ್ರಾಧ್ಯಾಪಕ,
ಲೊಯೊಲಾ ಕಾಲೇಜು
ಮನವಿ, ಕರ್ನಾಟಕ,
ಭಾರತ

# ನಂದಿಹೋದ ಮನೆಯ ಬೆಳಕು

**ಶ್ರೀ ಸಚಿನ್. ಆರ್**

## ಪೀಠಿಕೆ

ಆಧುನಿಕೋತ್ತರ ಜಗತ್ತಿನಲ್ಲಿ. ನಾವೆಲ್ಲರೂ ಬದುಕುತ್ತಿದ್ದೇವೆ. ಬದುಕಿನ ಒಂದು ಸುಂದರ ಸಂಗತಿಯೇ ಕುಟುಂಬ. ಕುಟುಂಬ ಎಂಬ ನಾಲ್ಕು ಪದಗಳಿಂದ ಹೇಗೆ ಕೂಡಿದೆಯೋ, ಹಾಗೆಯೇ ನಾಲ್ಕು ಮನಸ್ಸುಗಳು, ನಾಲ್ಕುನೂರು ಆಲೋಚನೆಗಳು, ನಾಲ್ಕು ಸಾವಿರ ಭಾವನೆಗಳಿಂದ ಕೂಡಿದೆ. ಈ ಜಗತ್ತಿನಲ್ಲಿರುವ ಮನುಷ್ಯರು ಭಾವನೆಗಳ ರಹಿತವಾಗಿ ಬದುಕನ್ನ ನಡೆಸುತ್ತಿದ್ದಾರೆ. ಈ ಕಥೆಯಲ್ಲಿ ಬರುವ ನಾಲ್ಕು ಮುಖ್ಯ ಪಾತ್ರಧಾರಿಗಳು ವಂಚನೆ, ಧಗ, ಮೋಸ ಎಂಬ ಮನೋಭಾವನೆಗಳನ್ನ ರೂಡಿಸಿಕೊಂಡು ಬಂದಿದ್ದಾರೆ. ಈ ಕಥೆಯಲ್ಲಿ ಬರುವ ಹೆಣ್ಣಿನ ಪಾತ್ರ ದಾರಿಯು ಜೀವನದಲ್ಲಿ ರೂಡಿಸಿಕೊಂಡು ಬಂದಿರುವ ಹಲವಾರು ಆದರ್ಶ ಮೌಲ್ಯಗಳು ಅವಳಿಗೆ ಮುಳ್ಳಾಗಿದೆ. ಏಕೆಂದರೆ ಪ್ರತಿಯೊಂದು ಪಾತ್ರವೂ ಅವಳ ಮನೋಧರ್ಮಕ್ಕೆ ವಿರುದ್ಧವಾಗಿಯೇ ರೂಪಿತಗೊಂಡಿದೆ.

ಒಂದು ಕುಟುಂಬ ಎಂದರೆ ಬರೀ ಜನರಿಂದ ಸೇರಿದ ಕೂಟವಲ್ಲ. ಅದೊಂದು ಭಾವನೆಗಳ ನೋವು-ನಲಿವು, ಆಯ-ವ್ಯಯ ಎಲ್ಲವನ್ನು ಒಳಗೊಂಡ ಒಂದು ಸಂಪೂರ್ಣ ಪಾಠಶಾಲೆ. ಅಂತಹದರಲ್ಲಿ, ಜಗತ್ತು ತುಂಬು ಕುಟುಂಬಗಳಿಂದ ಸಣ್ಣ ಕುಟುಂಬಗಳಾಗಿ ಬದಲಾಗುತ್ತಿದೆ. ಆ ಸಣ್ಣ ಕುಟುಂಬಗಳಲ್ಲಿ ಮೌಲ್ಯ, ಪ್ರೀತಿ, ವಾತ್ಸಲ್ಯ, ಸಂಬಂಧಗಳ ಬೆಲೆ ಎಲ್ಲವೂ ನಶಿಸಿಹೋಗಿವೆ. ಹಾಗಾಗಿ, ಒಂದು ತುಂಬು ಕುಟುಂಬದಲ್ಲಿ ಬೆಳೆದ ಒಬ್ಬ ಹೆಣ್ಣಿನ ಸಂಸಾರದ ಬಗ್ಗೆ ನಿಮಗೆ ತಿಳಿಸಲು ಇಚ್ಚಿಸುತ್ತೇನೆ.

ಒಮ್ಮೆ, ಒಂದು ಸಣ್ಣ ಊರು, ಆ ಊರಿನಲ್ಲಿ ಸಣ್ಣದೊಂದು ಕುಟುಂಬ, ದೂರದ ಉತ್ತರಭಾಗದಿಂದ ವಲಸೆ ಬಂದಿತ್ತು, ಆ ಕುಟುಂಬದಲ್ಲಿ ತಂದೆ, ತಾಯಿ, ಮಗಳು, ಮಗ ಇದ್ದರು. ತಂದೆಯೊಬ್ಬ ಸಣ್ಣ ವ್ಯಾಪಾರಿ, ತಾಯಿ ಮನೆಯ ಒಡತಿ. ಮಗಳು ವಿದ್ಯಾಭ್ಯಾಸದಲ್ಲಿ ತುಂಬಾ ಚುರುಕು, ಮಗ ವಿದ್ಯೆ ಅಷ್ಟರ ಮಟ್ಟಿಗೆ ಇಲ್ಲದೇ ಹೋದರು ಪೋಲಿತನಕ್ಕೆ ಯಾವುದೇ ಕಡಿಮೆ ಇರಲಿಲ್ಲ.

ವ್ಯಾಪಾರದಲ್ಲಿ ಯಜಮಾನನಿಗೆ ತಕ್ಕಷ್ಟು ಲಾಭವೂ ಇತ್ತು, ಇಡೀ ಕುಟುಂಬವನ್ನು ಸಂಪೂರ್ಣವಾಗಿ ತಾನೇ ನಿಭಾಯಿಸ್ತಾ ಇದ್ದ, ಒಂದಿಷ್ಟು ವೇದಶಾಸ್ತ್ರಗಳಲ್ಲಿ ನೈಪುಣ್ಯತೆ ಇತ್ತು. ಆತನಿಗೆ ಕೆಲವು ಚಟಗಳು ಇದ್ದವು, ಜೂಜಾಟ ಮತ್ತು ಸ್ತ್ರೀಯರ ಮೇಲೆ ವ್ಯಾಮೋಹ. ಜೂಜಾಟದಲ್ಲಿ ಸರಿಯಾಗಿ

ಹಣಗಳಿಸಲು ಸಾಧ್ಯವಾಗದಿದ್ದರೂ ಸ್ತ್ರೀಯರನ್ನು ಪಟಾಯಿಸುವ ಕಲೆಯನ್ನ ಸರಿಯಾಗಿ ಬಲ್ಲವನಾಗಿದ್ದನು. ಈ ಎಲ್ಲಾ ಚಟಗಳಿಗೆ ಹಣವನ್ನು ಸಂಪಾದಿಸಲು ಯೋಗ್ಯತೆ ಇಲ್ಲದೆ ಇದ್ದರೂ ಆ ಊರಿನ ಕೆಲವರ ಹತ್ತಿರ ಹಣವನ್ನು ಬಲವಂತವಾಗಿ ಕಸಿದುಕೊಂಡಿದ್ದನು. ಮನೆಯಲ್ಲಿದ್ದ ಹೆಂಡತಿಗೆ ಇದರ ಪರಿಜ್ಞಾನವೇ ಇಲ್ಲದೆ ಹೋಯಿತು ಏಕೆಂದರೆ ಅವಳೊಬ್ಬಳು ಅಲ್ಪಜ್ಞಾನಿ "ಪತಿಯೇ ಪರದೈವ" ವೆಂಬ ವೇದವಾಕ್ಯವನ್ನ ಪಾಲಿಸುತ್ತಾ ಬಂದವಳು. ಈತ ಸ್ತ್ರೀಯರನ್ನು ಪಳಗಿಸುವ ಕಲೆಯಲ್ಲಿ ಇಬ್ಬರು ಪರಸ್ತ್ರೀಯರನ್ನು ತನ್ನ ಬುಟ್ಟಿಗೆ ಸೆಳೆದುಕೊಂಡಿದ್ದ. ಒಂದು ಹೆಣ್ಣು ವಿಧವೆ, ಆ ವಿಧವೆಗೆ ಒಬ್ಬಳು ಸುಂದರವಾದ ಮಗಳು, ಇನ್ನೊಂದು ಹೆಣ್ಣು ಮಗಳು ಗಂಡನಿಂದ ಸರಿಯಾಗಿ ಸುಖವನ್ನು ಕಾಣದೇ ಇವನನ್ನು ಬಂದು ಸೇರಿಕೊಂಡವಳು.

ಯಜಮಾನನ ಕಲಾತ್ಮಕ ಕ್ರೀಡಾಕೂಟಗಳು ಆಗಾಗ ಜರಗುತ್ತಲಿದ್ದವು. ಬಣವೆ ಯಸಂಧಿಯಲ್ಲಿ, ಕಬ್ಬಿನ ಗದ್ದೆಯಲ್ಲಿ ಮತ್ತು ಪಾಳುಬಿದ್ದ ತೋಟದ ಮಿಷಿನ್ಬಾವಿಯಲ್ಲಿ. ಒಂದು ದಿನ ಸಂಜೆಯ ಜಮಾನನ ಮಗಳು, ಸರಿಸುಮಾರು 13 ರಿಂದ 14 ವರ್ಷದ ವಯಸ್ಸಿನವಳಾಗಿರಬಹುದು, ಆ ಊರಿನ ಅಂಗಳದಲ್ಲಿ, ಊರಿನ ಮಕ್ಕಳೊಡನೆ ಆಟವಾಡಲು ತೊಡಗಿದ್ದಳು. ಏನೋ ತಿಳಿಯದೆ ಆ ಮೂಲೆ ಮನೆಯ ಹಿತ್ತಲಿನಲ್ಲಿರುವ ಹುಲ್ಲಿನ ಬಣವೆಯತ್ತಾ ಅವರೆಲ್ಲರ ಗಮನಸೆಳೆಯುತ್ತದೆ. ಮಕ್ಕಳೆಲ್ಲರು ಗಮನಿಸಿ ಅಲ್ಲಿ ಏನೋ ಒಂದು ಅವಿತುಕೊಳ್ಳುತ್ತಿದೆ ಎಂಬ ಸಂಶಯವನ್ನು ಪಡೆದುಕೊಳ್ಳುತ್ತಾರೆ. ಆಗ ಅವಳನ್ನು ಹುರಿದುಂಬಿಸಿ ಅಲ್ಲಿ ಏನೋ ಇದೆ ಎಂಬುದನ್ನ ತಿಳಿದುಕೊಂಡು ಬರಲು ಕಳುಹಿಸಿತ್ತಾರೆ. ಆ ಹುಡುಗಿ ಭಯದಿಂದ ಎದುರಿ ನಡುಗುತ್ತಾ ಒಂದರ ಮೇಲೆ ಒಂದು ಹೆಜ್ಜೆ ಇಡುತ್ತಾ, ಆ ದಿಕ್ಕಿನಡೆಗೆ ಸಾಗುತ್ತಾಳೆ ಇನ್ನೇನು ಹತ್ತಿರ ಬರುತ್ತಿದ್ದ ಹಾಗೆ ಅಲ್ಲಿ ಒಂದು ಭಯಾನಕವಾದ ದೃಶ್ಯವನ್ನು ಅವಳು ಕಾಣುತ್ತಾಳೆ, ಅದು ಅವರಪ್ಪ ಬೆತ್ತಲಾಗಿ ಇದ್ದಾನೆ, ಆ ಹೆಣ್ಣು ಅರೆಬೆತ್ತಳಾಗಿ ಮಲಗಿದ್ದಾಳೆ. ಅಪ್ಪನ ರಾಸಲೀಲೆಯನ್ನು ಬಹಿರಂಗವಾಗಿ ಆ ಮಗಳು ಕಂಡಳು. ಯಜಮಾನ ಹಿಂದೆತಿರುಗಿ ನೋಡುತ್ತಾನೆ. ಅ ಕ್ಷಣ ಅಪ್ಪನ ಎದೆಯಲ್ಲಿ ಸಮುದ್ರದ ಅಲೆಗಳು ಉಕ್ಕಿ ಉರಿದುಂಬಿಸತ್ತಾಲಿದ್ದಾವೆ. ಈ ಘಳಿಗೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಮಗಳು ಊಹಿಸಲು ಅಸಾಧ್ಯಳಾದಳು. ಮಗಳು ಕಂಡ ದೃಶ್ಯವನ್ನು ಅಪ್ಪ ಮರೆಸುವಲ್ಲಿ ಹರಸಾಹಸವನ್ನೇ ಪಟ್ಟನು ಅವನ ಭಯ ಹೆಂಡತಿಗೆ ಎಲ್ಲಿ ನನ್ನ ರಹಸ್ಯ ತಿಳಿದು ಬಿಡುತ್ತದೆ ಎಂಬ ಸಂಶಯ ಅವನದ್ದು. ಆದರೆ ಅಲ್ಲಿಆದದ್ದು ಬೇರೆ.

ಆ ಹುಡುಗಿ ಹಿಂದೆತಿರುಗಿ ಜೋರಾಗಿ ಓಡಿ ಓಡಿ ಮಕ್ಕಳು ಆಟ ಆಡುವ ಜಾಗದ ಹತ್ತಿರ ಬಂದಳು. ಮಕ್ಕಳು ಎಲ್ಲರೂ ವಿಪರೀತವಾಗಿ ಅವಳನ್ನು ಪೀಡಿಸಿದರು. ಅಲ್ಲಿ ಏನು ನಡೆಯಿತು ಹೇಳು? ಅಲ್ಲಿ ಏನು ನಡೆಯಿತು ಹೇಳು? ಎಂದು ಅವಳನ್ನು ಪದೇ ಪದೇ ಕೇಳಲು ಆರಂಭಿಸಿದರು. ಅವಳು ಏನು ಹೇಳಬೇಕು ಎಂಬುದನ್ನು ತೋಚದೆ ಅವರಿಗೆ ಎರಡು ಬೆಕ್ಕುಗಳು ಕಚ್ಚಾಡುತ್ತಿದ್ದವು ಎಂದು ಸುಳ್ಳನ್ನ ಅವಳು ನುಡಿದಳು. ಈಗಾಗಲೇ ಸಮಯ ಕತ್ತಲಾಗುತ್ತಾ ಸಾಗುತ್ತಿದೆ ಹಾಗಾಗಿ ಆ ಹುಡುಗಿ ಮನೆಗೆ ತೆರಳುವಂತಹ ಯೋಚನೆಯನ್ನು ಮಾಡಿಕೊಂಡು ಹೊರಡುತ್ತಾಳೆ. ಮನೆಗೆ ಹೋಗುವ ದಾರಿಯಲ್ಲಿ ಅವಳು ಕಂಡಂತಹ ದೃಶ್ಯದ ಚಿತ್ರಣ ಪದೇ ಪದೇ ಅವಳಿಗೆ ನೆನಪಾಗುತ್ತಾ ಹೋಗುತ್ತವೆ ಆಕೆ ಕಂಡ ಆ ದೃಶ್ಯವನ್ನು ತನ್ನ ತಾಯಿಯ ಹತ್ತಿರ ತಿಳಿಸುವುದೋ? ಬೇಡವೋ? ಎಂಬುದು ಒಂದು ಆತಂಕ. ಆ ವಿಚಾರವನ್ನು ತನ್ನ ಗೆಳತಿಯರಲ್ಲಿ ತಿಳಿಸುವುದು ಉತ್ತಮವೋ? ಎಂಬುದು ಇನ್ನೂ ದೊಡ್ಡ ಆತಂಕ. ಹಾಗಾಗಿ ಅದನ್ನ ಅವಳು ತನ್ನ ಮನಸ್ಸಿನ ಆಳದಲ್ಲಿ ಹುದುಗಿಟ್ಟುಕೊಂಡಳು.

ಯಜಮಾನನ ಮಗಳು ಈಗ ಅವಳ ಮೊದಲ ಹಂತದ ವಿದ್ಯಾಭ್ಯಾಸವನ್ನು ಮುಗಿಸಿ, ಅವಳು ಈಗ ಉನ್ನತ ಶಿಕ್ಷಣಕ್ಕಾಗಿ ಹೊರಡಲು ತಯಾರಿಯನ್ನ ಮಾಡಿಕೊಳ್ಳುತ್ತಿದ್ದಾಳೆ, ಅದು ನಗರಕ್ಕೆ. ಅವಳೇ, ದೀಪ. ಅವಳೇನು ಆ ಸಣ್ಣ ವಯಸ್ಸಿನಲ್ಲಿ ನಡೆದಂತಹ ಘಟನೆಯನ್ನು ಮರೆತಿರಲಿಲ್ಲ, ಹಾಗಾಗಿ ಮಗಳು ತಂದೆಯನ್ನು ಸ್ಫೂರ್ತಿಯಾಗಿ, ಪ್ರೇರಣೆಯಾಗಿ ತೆಗೆದುಕೊಂಡಿದ್ದಳು. ಆಕೆಗೆ ಯಾವುದೋ ಆ ಹೊಸ ಲೋಕವನ್ನ ತಿಳಿದುಕೊಳ್ಳಬೇಕು ಎಂಬುದು ಎಲ್ಲಿಲ್ಲದ ಕಾತುರ. ಅದು ದಿನ ದಿಂದ ದಿನಕ್ಕೆ ಸಣ್ಣ ವಯಸ್ಸಿನಿಂದಲೇ ಹೆಚ್ಚುತ್ತಾ ಹೋಗಿತ್ತು. ಆ ಕ್ಷಣದಲ್ಲಿ ತಂದೆ ಹೇಳಿದ ಬುದ್ದಿಯ ಮಾತುಗಳನ್ನು ತಪ್ಪಾಗಿ ಅರ್ಥ ಮಾಡಿಕೊಂಡ ದೀಪ. ತನ್ನ ಪ್ರಯಾಣವನ್ನ ಅಪ್ಪನ ದಾರಿಯಲ್ಲಿಯೇ ಮುಂದುವರಿಸಲು ನಿರ್ಧರಿಸಿದ್ದಳು. ಆಗ ಆಕೆಗೆ ವಯಸ್ಸು 20 ರಿಂದ 21 ಆಗಿರಬಹುದು. ದೀಪ ತನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ, ಆ ಊರಿನಿಂದ ಬಹುದೂರದ ಪಟ್ಟಣದ ಕಾಲೇಜಿಗೆ ಸೇರಿಕೊಳ್ಳುತ್ತಾಳೆ. ಆ ಕಾಲೇಜಿನ ಹಾಸ್ಟೆಲ್‌ನಲ್ಲಿಯೇ ವಾಸ್ತವ್ಯವನ್ನು ಹೂಡುತ್ತಾಳೆ.

ದೀಪ ನಿಧಾನವಾಗಿ ತಂದೆಯ ರಾಸಲೀಲೆಗಳಂತೆ ತನ್ನ ರಾಸಲೀಲೆಗಳನ್ನ ಸೃಷ್ಟಿಸಲು ತಯಾರಿಯನ್ನು ಮಾಡಿಕೊಳ್ಳುತ್ತಿದ್ದಾಳೆ ಕಾಲೇಜಿನಲ್ಲಿ. ಕಾಲೇಜಿನಲ್ಲಿರುವ ಯುವಕರ ಗಮನವನ್ನು ಸೆಳೆಯುವುದು, ಅವರ ಪರಿಚಯವನ್ನು ಮಾಡಿಕೊಳ್ಳುವುದು,

ಪರಿಚಯವನ್ನು ಸ್ನೇಹವನ್ನಾಗಿ ಬದಲಾಯಿಸುವುದು, ಸ್ನೇಹದ ಗುಂಪಿನಲ್ಲಿರುವ ಯುವಕರನ್ನ ತನ್ನ ವ್ಯಮೋಹದ ಬಲೆಗೆ ಸಿಲುಕಿಸಿಕೊಳ್ಳುವುದು. ಇವಳ ದಿನ ನಿತ್ಯದ ಚಟುವಟಿಕೆಗಳಲ್ಲಿ ಇದು ಒಂದಾಗಿತ್ತು. ಅವಳು ಯುವಕರನ್ನ ಆಯ್ಕೆ ಮಾಡಿಕೊಳ್ಳುತ್ತಿದ್ದ ರೀತಿಯೇ ಮೋನೋಹರಕರವಾಗಿದೆ. ಅದರಲ್ಲೂ ಕಾಲೇಜಿನ ಸ್ನೇಹಿತೆಯರ ಅಣ್ಣಂದಿರು, ಬೀದಿಯಲ್ಲಿ ಚುಡಾಯಿಸುವ ಹುಡುಗರು, ಹಾಗೂ ಆಕೆಯೇ ಮನಸೋತ ಕೆಲವು ಸುಂದರವಾದ ಹುಡುಗರು ಇವರೆಲ್ಲರೊಂದಿಗೆ ಹಂತಹಂತವಾಗಿ ತನ್ನ ಆಕರ್ಷಕ ಕ್ರೀಡಾಕೂಟಗಳನ್ನು ವಿಸ್ತರಿಸುತ್ತಾ ಹೊರಟಿದ್ದಾಳೆ. ತನ್ನ 23ನೇ ವಯಸ್ಸಿಗೆ, ವಿದ್ಯಾಭ್ಯಾಸದ ಪಟ್ಟಿಯು ಬೆಳೆದಂತೆ ಅವಳ ರಾಸಲೀಲೆಯ ಪಟ್ಟಿಯು ಬೆಳೆಯುತ್ತಲೇ ಹೋಯಿತು. "ತಂದೆಯನ್ನೇ ಮೀರಿಸಿದ ಮಗಳು" ಎಂಬ ಕೀರ್ತಿಗೆ ಪಾತ್ರಳಾದಳು ಈಗಾಗಲೇ ಅನೇಕ ಯುವಕರ ಬಾಳಾನ್ನು ಹಾಳು ಮಾಡಿದ್ದಾಳೆ ಅದರ ಜೊತೆ ಜೊತೆಯಲ್ಲೇ ಹಾಸ್ಟೆಲಿನ ಕೆಲವು ಸ್ನೇಹಿತೆಯರನ್ನು ದಾರಿತಪ್ಪಿಸಿದ್ದಾಳೆ. ಈ ಎಲ್ಲಾ ವಿಚಾರಗಳನ್ನು ಅವಳು ರಹಸ್ಯ ಮಯವಾಗಿ ಕುಡಿಹಿಡಲು ದಿನೇ ದಿನೇ ಶ್ರಮವಹಿಸುತ್ತಿದ್ದಾಳೆ. ಪಾಪದ ಮೂಟೆ, ತಂದೆಯಿಂದ ಮಗಳಿಗೆ ಬಳುವಾಳಿಯಾಗಿ ದೊರೆತ್ತ ಆ ಮೂಲ್ಯ ವಸ್ತು.

ಕಾಲ ಯಾರಿಗೂ ನಿಲ್ಲುವುದಿಲ್ಲ ಎಂಬ ತತ್ವದೊಂದಿಗೆ, ದೀಪ ರಹಸ್ಯವಾಗಿ ಕೂಡಿಟ್ಟಿದ್ದಂತಹ ಎಲ್ಲಾ ಸಂಗತಿಗಳು ತಮ್ಮನಿಗೆ ತಿಳಿದೇ ಹೋಯಿತು. ತಮ್ಮನ ಹೆಸರು ವಿಘ್ನೇಶ್. ಅಕ್ಕ ತಮ್ಮನಿಗೆ ಯಾವ ಒಂದು ಕಿವಿ ಮಾತನ್ನು ಹೇಳುವುದಿಲ್ಲ. ಇವಳು ಅಪ್ಪನ ಹಾಗೇಯೆ ಸಾಂತ್ವಾನ ಮಾಡಲು ಹೋಗಲಿಲ್ಲ ಏಕೆಂದರೆ ಅಕ್ಕ ತಮ್ಮನಿಗೆ ಏನೂ ತಿಳಿಯುವುದಿಲ್ಲ ಎಂಬ ಭ್ರಮ ಲೋಕದಲ್ಲಿಯೇ ಜೀವಿಸುತ್ತಿದ್ದಳು. ಇಲ್ಲಿ ಅವಳು ಅಂದು ಕೊಂಡ ರೀತಿ ಬದಲಾಗಿ ಹೋಯಿತು. ದೀಪ ಅಂದು ಕೊಂಡಂತೆ ತಮ್ಮ ಬಹಳ ಚಿಕ್ಕವಯಸ್ಸಿನವನೇನಲ್ಲ ಆತ ಸರಿಸುಮಾರು 19 ರಿಂದ 20 ವಯಸ್ಸಿನವನು, ಅಕ್ಕನ ಮೋಸದ ಆಟಗಳನ್ನು ಚೆನ್ನಾಗಿಯೇ ಬಲ್ಲವನು. ಆ ಆಟಗಳು ತಮ್ಮನ ಮನಸ್ಸಿನ ಮೇಲೆ ಬಹು ದೊಡ್ಡ ಪರಿಣಾಮವನ್ನು ಬೀರಿದವು. ಅಂದಿನಿಂದ, ಆತನ ಮನಸ್ಸಿನಲ್ಲಿಒಂದು ಹೊಸ ಆಸೆ ಚಿಗುರು ಹೊಡೆಯಿತು, ಅದು ಹುಡುಗಿಯರ ಅಮಲನ್ನ ಆತ ದಿನ ದಿಂದ ದಿನಕ್ಕೆ ಬೆಳೆಸಿಕೊಳ್ಳಲು ಆರಂಭಿಸಿದನು. ವಿಘ್ನೇಶನಿಗೆ ಈಗ ಚಿಗುರು ಮೀಸೆ ಮುಖದ ಮೇಲೆ ಕಾಣಿಸಿ ಕೊಳ್ಳುತ್ತಲಿದೆ. ಸೊಂಟದ ಮೇಲೆ ಪ್ಯಾಂಟು ಕೂಡ ನಿಲ್ಲುತ್ತಿಲ್ಲ. ಆ ವಯಸ್ಸಿಗೆ ಆಗಲೇ ತನ್ನ ಅಕ್ಕ ಮತ್ತೆ ಅಪ್ಪನನ್ನ ನೋಡಿ ಬೆಳೆದವ. ವಿಘ್ನೇಶ ತನ್ನ ಮನೆಯ ವಾತಾವರಣದಲ್ಲಿ ಬೆಳೆದಿದ್ದರಿಂದ ಅಪ್ಪ ಮತ್ತೆ ಅಕ್ಕ ನಡೆದು ಬಂದ ದಾರಿಯನ್ನು ಆತ ಮೀರಲಿಲ್ಲ. ಆ ಮೋಸದ ಜಾಲಗಳನ್ನು ವಿಸ್ತರಿಸುತ್ತಲೇ ಹೊರಟನು. ಆತನ ಕಾಲೇಜಿನ ಸ್ನೇಹಿತರು, ಸ್ನೇಹಿತನ ತಂಗಿಯಂದಿರು, ಸ್ನೇಹಿತೆಯರ ಸ್ನೇಹಿತೆಯರು, ಹೀಗೆ ತನ್ನ ರಾಸಲೀಲೆಯ ಮಾಯಾಜಾಲವನ್ನು ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ಪಸರಿಸುತ್ತಲೇ ಹೊರಟನು. ಅಕ್ಕನ ಹಾದಿಯನ್ನು ತಮ್ಮ ಎಲ್ಲಿಯೂ ಮೀರದ ಹಾಗೆ ನಿಯತ್ತಾಗಿ ಅದನ್ನು ಹಿಂಬಾಲಿಸುತ್ತ ಹೊರಟಿರುವನು.

ಇಡೀ ಪರಿವಾರದಲ್ಲಿ ಈ ಮೂವರು ತಮ್ಮ ತಮ್ಮದೇ ಆದ ರಾಸಕ್ರೀಡೆಗಳನ್ನು ನಡೆಸುತ್ತಿದ್ದಾರೆ. ಒಬ್ಬರಿಗೆ ಒಬ್ಬರು ತುಂಬಾ ತುಂಬಾ ಹಿಂಬಾಲಕರಾಗಿ ನಡೆದುಕೊಳ್ಳುತ್ತಿದ್ದಾರೆ. ಆ ತಾಯಿಯನ್ನು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಮೋಸಗೊಳಿಸುತ್ತಿದ್ದಾರೆ. ಇದರ ಸಂಪೂರ್ಣ ಪರಿಜ್ಞಾನ ವಿಲ್ಲದ ಆ ತಾಯಿ, ತಂದೆಯ ಹೊಡೆತಗಳಿಗೆ ಬಲಿಯಾಗುತ್ತಿದ್ದಾಳೆ, ಮಗಳ ಚುಚ್ಚು ಮಾತುಗಳಿಗೆ ಒಳಗಾಗುತ್ತಿದ್ದಾಳೆ, ಮಗನ ಅಸಡ್ಯ ವರ್ತನೆಗೆ ಸಿಕ್ಕಿಹಾಕಿಕೊಂಡಿದ್ದಾಳೆ ಈ ಮೂವರಿಗೂ ಚೆನ್ನಾಗಿಯೇ ತಿಳಿದಿದೆ ಅವರು ರಹಸ್ಯವಾಗಿ ಇಟ್ಟಿರುವ ಕಹಿಸತ್ಯ ಏನು ಎಂಬುದು. ಆದರೇ ಇವರು ಯಾರೊಬ್ಬರಿಗೂ ಕೂಡ ಬಹಿರಂಗಪಡಿಸಲು ಸಿದ್ದವಿಲ್ಲ. ಹಾಗೂ ಯಾರಿಗೂ ಇದು ಒಂದು ರೀತಿಯ ತಪ್ಪು ಎಂಬ ಮನವರಿಕೆಯು ಆಗುತ್ತಿಲ್ಲ.

ಒಂದು ಘನ ಘೋರ ಘಟನೆಯ ಮೂಲಕ ಸಂಬಂಧಗಳ ಮೌಲ್ಯವು ಅನಾವರಣಗೊಳ್ಳಲಿದೆ. ಒಂದು ದಿನ ಯಜಮಾನ ಎಂದಿನಂತೆ ತನ್ನ ಹೆಂಡತಿಗೆ ಹೇಳುವ ಸುಳ್ಳಿನೊಂದಿಗೆ ನಾನು ಕೆಲಸಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಆ ವಿಧವೇ ಹೆಣ್ಣಿನೊಂದಿಗೆ ಮಯೂರ ಲಾಡ್ಜ್ನಲ್ಲಿ ತಂಗುತ್ತಾನೆ. ಅದೇ ಸಮಯದ ನಂತರದಲ್ಲಿ ಮಗಳು ಕಾಲೇಜಿನಲ್ಲಿ ಕಾರ್ಯಕ್ರಮವಿದೆ ಎಂದು ತಾಯಿಗೆ ಚುಚ್ಚು ಮಾತುಗಳ ಮೂಲಕ ತಿಳಿಸಿ ಅವಳ ಪ್ರಿಯಕರನೊಂದಿಗೆ ಅದೇ ಲಾಡ್ಜ್ನಲ್ಲಿ ಪ್ರವೇಶವನ್ನು ಪಡೆಯುತ್ತಾಳೆ. ತುಂಬಾ ಉತ್ಸಾಹದಾಯಕನಾದ ಮಗನು ಕೂಡ ತನ್ನ ಬಹಳ ಹಿಂದಿನ ಪ್ರೇಯಸಿಯೊಂದಿಗೆ ಅದೇ ಲಾಡ್ಜ್ನಲ್ಲಿ ಕೋಣೆಯನ್ನ ತೆಗೆದುಕೊಳ್ಳುತ್ತಾನೆ.

ದುರಾದೃಷ್ಟಾವಷತ್, ಎಲ್ಲರೂ ಒಂದೇ ಕಡೆ, ಒಂದೇ ಮಹಡಿಯ ಅಕ್ಕಪಕ್ಕದ ಕೋಣೆಗಳಲ್ಲಿ ತಂದೆ, ಮಗಳು, ಮಗ, ತಮ್ಮ ವೈಯಕ್ತಿಕ ಕಳ್ಳ ವ್ಯವಹಾರವನ್ನು ನಡೆಸಲು ಅಲ್ಲಿ ಸೇರಿದ್ದಾರೆ .

ಸ್ವಲ್ಪ ಸಮಯದ ನಂತರ, ಅಂದರೆ ಸರಿಸುಮಾರು 9 ಗಂಟೆ, ಊಟದ ನಂತರ, ಮಗ ವಿಘ್ನೇಶ ಆತನ ಪ್ರೇಯಸಿಯ ನಡುವೆ ಒಂದು ಕುತೂಹಲಕಾರಿ ಸಂಘರ್ಷ ತುಂಬಾ ಜೋರಾಗಿಯೇ ಇತ್ತು, ಆಕೆ ನರಳಾಡುವ, ಕಿರುಚಾಡುವ ಹಾಗೂ ವಿಪರೀತ ಸದ್ದು ಇತ್ತು. ಏಕೆಂದರೆ ಆತನ ಪ್ರೇಯಸಿ ಅನ್ಯ ಹುಡುಗರ ಸಹವಾಸ ಇಟು ಕೊಂಡಿರುವಳು ಎಂಬ ಸಂಶಯದಿಂದ ಅವಳನ್ನು ಹೊಡೆತಗಳಿಂದ, ಕಪಾಳಮೋಕ್ಷದಿಂದ, ನಿಂದಿಸುತ್ತಲೆ ಇದ್ದನು. ಈ ಸದ್ದು ಅಕ್ಕ ಪಕ್ಕದ ಕೋಣೆಗಳಿಗೆ ಬಹಳ ಸರಳವಾಗಿಯೇ ಕೇಳಿಸ ತೊಡಗಿತು. ಪಕ್ಕದ ಕೋಣೆಯಲ್ಲಿ ಏಕಾಂತದಲ್ಲಿ ಮಲಗಿದ್ದ ಅಕ್ಕ ದೀಪ ಮತ್ತು ಅಕ್ಕನ ಪ್ರಿಯತಮನಿಗೆ ಈ ಸದ್ದು ಸಹಿಸಲು ಸಾಧ್ಯವೇ ಆಗಲಿಲ್ಲ. ಅಕ್ಕನ ಪ್ರಿಯತಮ ಕೋಣೆಯಿಂದ ಹೊರಗಡೆ ಬಂದು ಏನಾಗಿದೆ ಎಂದು ವಿಚಾರಿಸಲು ಮುಂದಾಗುತ್ತಾನೆ, ಅವನ ಹಿಂದೆ ದೀಪಳು ಹೊರಟು ಬರುತ್ತಾಳೆ.

ದೀಪಾಳ ಪ್ರಿಯತಮನು ತನ್ನ ಹೆಜ್ಜೆಗಳನ್ನ ಬೇಗ ಬೇಗನೆ ಮುಂದುವರಿಸುತ್ತಾ ಆ ಕೋಣೆಯ ಸದ್ದಿನತ್ತ ಮುಂದೆ ನಡೆಯುತ್ತಾನೆ, ಅಲ್ಲಿ ಹೋಗಿ ಬಾಗಿಲನ್ನು ತಟ್ಟಿ ಏನು ನಡೆಯುತ್ತಿದೆ ಎಂದು ಆತ ವಿಚಾರಿಸುತ್ತಿದ್ದಾಗಲೇ ಒಂದು ವಿಸ್ಮಯಕಾರಿ ಸಂಗತಿ ಬೆಳಕಿಗೆ ಬರುತ್ತದೆ .ಅಕ್ಕನ ಮುಖವನ್ನ ವಿಘ್ನೇಶ ನೋಡುತ್ತಿದ್ದಾನೆ, ವಿಘ್ನೇಶನಾ ಮುಖವನ್ನು ದೀಪಳು ನೋಡುತ್ತಿದ್ದಾಳೆ, ಇಬ್ಬರಿಗೂ ವಿಸ್ಮಯ, ಆಘಾತ, ನೋವು ಎಲ್ಲವೂ ಒಂದೇ ಕ್ಷಣದಲ್ಲಿ ಕಣ್ಣು ಮುಂದೆ ಬಂದು ನಿಂತಿದೆ. ಇಬ್ಬರು ಮೌನಿಗಳಾಗಿದ್ದಾರೆ. ಏಕೆಂದರೆ ತಾವು ರಹಸ್ಯವಾಗಿ ನಡೆಸುತ್ತಿದ್ದಂತಹ ರಾಸಲೀಲೆ ಬಹಿರಂಗವಾಯಿತಲ್ಲ ಎಂಬ ಕೊರಗು ಅವರ ಮುಖದ ಭಾವದಲ್ಲಿ ಆವರಿಸಿದೆ. ದೀಪಳಾ ಪ್ರಿಯತಮ ಏನಾಯಿತು ಹೇಳು ದೀಪ? ಏನಾಯ್ತು ಹೇಳು ದೀಪ? ಎಂಬ ಪದಗಳನ್ನು ಬಿಟ್ಟು ಆತನಿಗೆ ಬೇರೆ ಏನೋ ಕೂಡ ತೋಚುತ್ತಿಲ್ಲ. ವಿಘ್ನೇಶನ ಪ್ರಿಯತಮೆಗೆ ಅವಳು ಇರುವಂತಹ ಸ್ಥಿತಿ ಮತ್ತು ಸ್ಥಾನದ ಬಗ್ಗೆ ಅರಿವು ಇಲ್ಲದೇ ಕಂಬ ನಿಂತಿರುವ ರೀತಿ ನಿಂತಿದ್ದಾಳೆ. ಇಲ್ಲಿ ನಡೆಯುತ್ತಿರುವಂತಹ ಎಲ್ಲಾ ದೃಶ್ಯಗಳನ್ನ ಕಣ್ಣಾರೆ ಕಂಡು ಕೋಣೆಯ ಎದುರುಗಡೆ ಇರುವಂತಹ ಕೋಣೆಯ ಬಾಗಿಲಿಗೆ ಒರಗಿನಿಂತಿರುವ ಕಲ್ಲು ಹೃದಯದ ಯಜಮಾನ.

ಯಾರ ಹತ್ತಿರವೂ ಮಾತುಗಳಿಲ್ಲ. ಯಜಮಾನನಿಗೆ ಅಲ್ಲಿ ತನ್ನ ಮಕ್ಕಳನ್ನ ಕಂಡು ಹೃದಯ ನುಚ್ಚುನೂರಾಗಿ ಹೋಗಿದೆ, ಮಕ್ಕಳ ಸ್ಥಿತಿ ಚಿಂತಾಜನಕವಾಗಿದೆ ಏನೆಂದು ಉತ್ತರಿಸಲಿ, ಏನನ್ನ ನುಡಿಯಲಿ ಎಂಬುದು ಅವರ ಆತಂಕದ ಭಯ. ಹೀಗೆ ಮಯೂರ ಲಾಡ್ಜ್ನಲ್ಲಿ ಸ್ಮಶಾನಮೌನ ಆವರಿಸಿ ಇಡೀ ರಾತ್ರಿ ಕಳೆದು ಹೋಯಿತು

ಬೆಳಿಗ್ಗೆ ಸರಿಸುಮಾರು 7 ಗಂಟೆ, ಒಬ್ಬರ ನಂತರ ಒಬ್ಬರು ಮನೆಗೆ ಮರಳುತ್ತಿದ್ದಾರೆ, ತಾಯಿ ಎಲ್ಲರ ಆಗಮನಕ್ಕಾಗಿ ಕಾದು ಕಾದು ಕುಳಿತಿರುತ್ತಾಳೆ, ಅವಳ ಮುಖದಲ್ಲಿ ಆತಂಕದ ಛಾಯೆ, ಮೊದಲು ಯಜಮಾನ ಬರವನು ಹೆಂಡತಿ ತನ್ನ ಗಂಡ ಕೆಲಸದ ಆಯಾಸದಿಂದ ಬಳಲಿ ಬಂದಿದ್ದಾನೆ ಎಂದು ವಿಚಾರಿಸಿ ಉಪಚರಿಸುತ್ತಾಳೆ ಆದರೆ ಅಮಾಯಕಿ, ಅವಳಿಗೆ ಅರಿಯದು ಗಂಡನ ಮೋಸದ ಜಾಲ. ನಂತರ ಮಗಳು ಬರುವಳು, ತಾಯಿಗೆ ಮಗಳನ್ನು ಕಂಡು ಕೂಡಲೇ ಎಲ್ಲಿಲ್ಲದ ಹರುಷ, ನನ್ನನ್ನು ಯಾರಾದರೂ ಪ್ರತಿಬಿಂಬಸುತ್ತಾರೆ ಎಂದರೆ ಅದು ನನ್ನ ಮಗಳೇ ಎಂಬ ಹೆಮ್ಮೆ ಅವಳದ್ದು. ಆದರೆ ಮಗಳು ನಡತೆಕೆಟ್ಟವಳು ಎಂಬುದು ಆಕೆಗೆ ಅರಿಯದು. ಕೊನೆಯದಾಗಿ ಮಗನ ಆಗಮನ, ತಾಯಿ ಮಗನನ್ನು ತುಂಬಾ ವಿನಮ್ರವಾಗಿ ಆಗಮನ ಮಾಡಿಕೊಳ್ಳುತ್ತಾಳೆ. ಇಂದಲ್ಲ ನಾಳೆ ನನ್ನ ಮಗನ ಭವಿಷ್ಯ ಉಜ್ವಲವಾಗಿ ಮೂಡಿ ಬರುತ್ತೆ ಎಂಬ ಕಲ್ಪನಾ ಬದುಕನ್ನ ಅವಳು ಬದುಕುತ್ತಿದ್ದಾಳೆ. ಆದರೆ ಮಗನು ಹೆಣ್ಣಿನ ಸೀರಿಯ ಸೆರಗನ್ನು ಮೂಸುವ ಕೆಲಸದಲ್ಲಿ ನಿರತನಾಗಿದ್ದಾನೆ ಎಂದು ಅವಳಿಗೆ ತಿಳಿಯದು.

ಈಗ, ಈ ಮೂವರು ಸೇರಿ ಆ ಕುಟುಂಬದ ಹೆಣ್ಣಿಗೆ ಮೋಸದ ರುಚಿಯನ್ನು ಕಾಣದ ಹಾಗೆಯೇ ಜೀವನವನ್ನು ಇಷ್ಟು ದಿನಗಳ ಕಾಲ ಸಾಗಿಸುತ್ತಲೇ ಬಂದಿದ್ದಾರೆ. ಏನೋ ಅರಿಯದ ಹೆಣ್ಣು ಎಲ್ಲವೂ ತನ್ನದೇ ತಪ್ಪು ಎಂದು ಕೊಂಡು ತನ್ನ ಜೀವ ಮತ್ತು ಜೀವನವನ್ನು ಅವರಿಗಾಗಿ ತ್ಯಾಗ ಮತ್ತು ಅರ್ಪಣೆಯ ಮೂಲಕ ಮುಡಿಪು ಇಟ್ಟಿದ್ದಾಳೆ. ಮತ್ತು ಅವರಿಗಾಗಿಯೇ ಜೀವಿಸುತ್ತಿದ್ದಾಳೆ. “ತಂದೆಗೆ ತಕ್ಕ ಮಗ” ಎಂದು ಶಭಾಷ್ಗಿರಿ ಪಡೆದ ವಿಘ್ನೇಶ. “ತಾಯಿಯಂತೆ ಮಗಳು ನೂಲಿನಂತೆ ಸೀರೆ” ಎಂಬ ಗಾದೆಯನ್ನು ಸುಳ್ಳುಮಾಡಿದ ದೀಪ. ರಾಮನ ಆದರ್ಶ ತತ್ವವನ್ನ ಮುರಿದ ಯಜಮಾನ.

ಈ ಎಲ್ಲಾ ಮೋಸದ ಸಂಗತಿಗಳ ಬಗ್ಗೆ ಆ ತಾಯಿಯ ಮೃದು ಹೃದಯ ಕಂಡು ಕೊಂಡರೆ ಮುಂದಿನ ಪರಿಸ್ಥಿತಿ ಏನು? ಆ ತಾಯಿಯ

ಕಡುದುಃಖವನ್ನು ಬಲ್ಲವರು ಯಾರು? ಈ ಮೂವರು ಅವರ ಜೀವನದಲ್ಲಿ ಬದಲಾವಣೆಗಳನ್ನು ಕಂಡುಕೊಂಡು ಆ ಹೆಣ್ಣಿಗೆ ನ್ಯಾಯವನ್ನು ಒದಗಿಸುತ್ತಾರೋ?ಅಥವಾ ಇಲ್ಲವೋ? ಎಂಬುದೇ ಒಂದು ವಿಸ್ಮಯಕಾರಿ ಸಂಗತಿ.

## ಮುಕ್ತಾಯ

"ನಂದಿಹೋದ ಮನೆಯ ಬೆಳಕು: ಒಂದು ಪರಿಹಾರವಲ್ಲದ ದುಃಖಾತ್ಮಕ ಕಥೆ" ಈ ಕಥೆಯಲ್ಲಿ ಬರುವ ಹೆಣ್ಣಿನ ಪಾತ್ರಕ್ಕೆ ತಾನು ಮೋಸ ಹೋಗುತ್ತಲ್ಲಿದ್ದೇನೆ ಎಂಬುದು ಕೊನೆಗೂ ತಿಳಿಯುವುದಿಲ್ಲ. ಅವಳ ಆದರ್ಶ ಮೌಲ್ಯಗಳೇ ಅವಳನ್ನು ಕಟ್ಟಿ ಹಾಕಿದೆ. "ಹೆಣ್ಣೊಂದು ಸೂಕ್ಷ್ಮ ಹೃದಯದ ಹೊನ್ನು" ಹಾಗಾಗಿ ಅವಳಿಗೆ ಆಗುತ್ತಿರುವ ಅನ್ಯಾಯದ ಸಂಗತಿಗಳಿಗೆ ಪರಿಹಾರಗಳನ್ನು ಹುಡುಕುವವರು ಯಾರು ಇಲ್ಲ. "ನಂದಿಹೋದ ಮನೆಯ ಬೆಳಕು" ಕಥೆಯು ಮಾನವ ಆತ್ಮದ ಸ್ಥಿತಿಸ್ಥಾಪಕತ್ವ ಮತ್ತು ಕ್ಷಮೆ ಮತ್ತು ನಂಬಿಕೆಯ ಪರಿವರ್ತಕ ಶಕ್ತಿಗೆ ಸಾಕ್ಷಿಯಾಗಿದೆ.

## ಲೇಖಕರ ಬಗ್ಗೆ

**ಶ್ರೀ ಸಚಿನ್. ಆರ್. ಬಿಎ, ಎಂ.ಎ-ಇಂಗ್ಲಿಷ್**

ಸಚಿನ್. ಆರ್. ಆದ ಇವರು ಸಂಪೂರ್ಣವಾಗಿ ಒಂದು ವರ್ಷದ ಅನುಭವವನ್ನು ಶಿಕ್ಷಣ ಕ್ಷೇತ್ರದಲ್ಲಿ ಪಡೆದುಕೊಂಡಿರುತ್ತಾರೆ. ಇವರ "ಬ್ಯಾಚುಲರ್ಸ್ ಆಫ್ ಆರ್ಟ್ಸ್" ಹಾಗೂ "ಮಾಸ್ಟರ್ಸ್ ಆಫ್ ಆರ್ಟ್ಸ್" ಪದವಿಗಳನ್ನು ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ಸ್ವೀಕರಿಸಿರುತ್ತಾರೆ. ಮಕ್ಕಳಲ್ಲಿ ಇಂಗ್ಲಿಷ್ ಸಾಹಿತ್ಯದ ಹೊಸ ಅಭಿರುಚಿಯನ್ನು ಮೂಡಿಸುವಲ್ಲಿ ನಿರತರಾಗಿದ್ದಾರೆ. ಒಂದು ವರ್ಷದ ಶೈಕ್ಷಣಿಕ ವೃತ್ತಿಯ ಅನುಭವದೊಂದಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಮೂಡಿ ಬಂದಿರುವ ಆದರ್ಶಗಳನ್ನು, ತತ್ವಗಳನ್ನು ವಿಶೇಷವಾಗಿ ಗ್ರಾಮೀಣ ಭಾಗದ ಮಕ್ಕಳಿಗೆ ತಲುಪಿಸುವ ಮಹದಾಸೆಯಿಂದ ಮುಂದುವರಿಯುತ್ತಿದ್ದಾರೆ.

## ಉಲ್ಲೇಖಗಳು

1. ಹೆಲೆನ್ ಸಿಕ್ಸಸ್ ದಿ ಲಾಫ್ ಆಫ್ ದಿ ಮೆಡುಸಾ.
2. ದಿ ಟೈಮ್ಸ್ ಆಫ್ ಇಂಡಿಯಾ, ಟೀಮ್ (19 ಸೆಪ್ಟೆಂಬರ್ 2006). "ನಾಯಿ ನೇರಳು ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ" . ಟೈಮ್ಸ್ ಆಫ್ ಇಂಡಿಯಾ . 24 ಮಾರ್ಚ್ 2022 ರಂದು ಮೂಲದಿಂದ ಆರ್ಕೈವ್ ಮಾಡಲಾಗಿದೆ . 25 ಮಾರ್ಚ್ 2022 ರಂದು ಮರುಸಂಪಾದಿಸಲಾಗಿದೆ .
3. ತಬ್ಬಲಿಯು ನೀನಾದೆ ಮಗನೆ-ಎಸ್ ಎಲ್ ಭೈರಪ್ಪ
4. ಕರ್ಮ-ಕರಣಂ ಪವನ್ ಪ್ರಸಾದ್
5. ನಮ್ಮ ಊರಿನ ರಸಿಕರು-ಗೊರೂರು ರಾಮಸ್ವಾಮಿ ಅಯ್ಯಂಗಾರ್